OS No. 16/2024
PW-2

**(ಇಂದು ದಿಃ 17-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.HSR ವಕೀಲರಿಂದಃ-**

ನನಗೆ 60-70 ವರ್ಷ ವಯಸ್ಸು ಇರಬಹುದು ಎಂದರೆ ಸರಿ. ನನ್ನ ವಯಸ್ಸು ತೋರಿಸಲು ನನ್ನ ಆಧಾರ ಕಾರ್ಡ ಹಾಜರುಪಡಿಸಿಲ್ಲ, ನನ್ನ ತವರು ಮನೆ ಮತ್ತು ಗಂಡನ ಮನೆ ಎರಡು ನಾಚವಾರದಲ್ಲಿದೆ. ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ನನಗೆ ವಾದಿ ಕರೆದುಕೊಂಡು ಬಂದಿದ್ದಾರೆ. ವಾದಿ ಮನೆ ಮತ್ತು ನಮ್ಮ ಮನೆ ಅಕ್ಕ ಪಕ್ಕದಲ್ಲಿವೆ ಎಂದರೆ ಸರಿ. ನಮ್ಮ ಮನೆಯ ಒಳ್ಳೆಯ ಮತ್ತು ಕೆಟ್ಟ ವಿಷಯಗಳಿಗೆ ವಾದಿ ಮನೆಯವರು ಮತ್ತು ಅವರು ಮನೆಯ ಒಳ್ಳೆಯ ಮತ್ತು ಕೆಟ್ಟ ವಿಷಯಗಳಿಗೆ ನಾವು ಹೋಗುತ್ತೇವೆ ಬರುತ್ತೇವೆ ಎಂದರೆ ಸರಿ. ವಾದಿ ಅಜ್ಜಿಯ ಜಮೀನು ಸಂಬಂಧ ಸಾಕ್ಷಿ ಹೇಳಲು ಬಂದಿದ್ದೇನೆ. ವಾದಿ ಅಜ್ಜಿ ಬದುಕಿದ್ದಾಗ ದಾವಾ ಸ್ವತ್ತು ಅವಳಿಗೆ ಸೇರಿತ್ತು ನಾನು ಅದನ್ನು ನೋಡಿದ್ದೇನೆ. ನಾನು ದಾವಾ ಸ್ವತ್ತನ್ನು ಸುಮಾರು 10 ವರ್ಷಗಳ ಹಿಂದೆ ನೋಡಿದ್ದೇನೆ. ನಾನು 30-35 ವರ್ಷಗಳ ಹಿಂದೆ ದಾವಾ ಸ್ವತ್ತನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು 7-8 ಎಕರೆ ಇದೆ. ದಾವಾ ಜಮಿನಿನ ಚೆಕಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಯ ಅಜ್ಜಿಯ ಹೆಸರಿನಲ್ಲಿದ್ದಾಗ ಜಮೀನಿಗೆ ಹೋಗಿದ್ದೆ ನಂತರ ಹೋಗಿದ್ದೆ ಎಂದರೆ ಸರಿಯಲ್ಲ. ಮಲ್ಲಮ್ಮ ಬದುಕಿದ್ದಾಗ ನಾನು ಅವಳ ಬಳಿ ಹೋಗಿ ಬರುತ್ತಿದ್ದೆ. ಮಲ್ಲಮ್ಮಳಿಗೆ ಮತ್ತು ದಾವಾ ಸ್ವತ್ತುಗಳಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಾಣಿಕಮ್ಮ ಬದುಕಿದ್ದಾಗ ದಾವಾ ಸ್ವತ್ತನ್ನು ರಾಮಲಿಂಗಪ್ಪನಿಗೆ ಮಾರಾಟ ಮಾಡಿದ್ದಾಳೆ ಎಂದರೆ ಸರಿಯಲ್ಲ. ಅದರಂತೆ ಕಂದಾಯ ದಾಖಲಾತಿಗಳು ರಾಮಲಿಂಗಪ್ಪನ ಹೆಸರಿಗೆ ಆಗಿದ್ದು ಅಂದಿನಿಂದ ಅವರೇ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಮುಂಚೆ ನಾನು ನಡೆದುಕೊಂಡು ಹೋಗುತ್ತಿದ್ದೆ. ದಾವಾ ಸ್ವತ್ತು ನಮ್ಮ ಮನೆಯಿಂದ ಎಷ್ಟು ಕೀ.ಮೀ ದೂರ ಇದೆ ನನಗೆ ಗೊತ್ತಿಲ್ಲ. ನಾಚವಾರದಿಂದ ಹುಲಗೋಳಕ್ಕೆ 7-8 ಕೀ.ಮೀ ಆಗುತ್ತದೆ ಎಂದರೆ ಇರಬಹುದು. ಕಾರಣ ಹುಲಗೊಳ ಆಸ್ತಿಗೆ ಮತ್ತು ವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಾಣಿಕಮ್ಮಳಿಗೆ ದಾವಾ ಜಮೀನು ಒಂದೇ ಇತ್ತು ಅಥವಾ ಬೇರೆ ಜಮೀನುಗಳು ಇದ್ದವು ಎಂದರೆ ನಾನು ದಾವಾ ಜಮೀನು ಮಾತ್ರ ನೋಡಿದ್ದೇನೆ ಎಂದು ಹೇಳುತ್ತಾರೆ.

ಮಾಣಿಕಮ್ಮಳಿಗೆ 3-4 ಜಮೀನುಗಳು ಇದ್ದವು ಅವುಗಳನ್ನು ಮಲ್ಲಮ್ಮ ಮತ್ತು ವಾದಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈಗ ದಾವಾ ಜಮೀನಿನ ಮಾರುಟಕಟ್ಟೆ ಬೆಲೆ ಹೆಚ್ಚಾಗಿರುವ ಕಾರಣ ದಾವಾ ಸ್ವತ್ತನ್ನು ಈಗಾಗಲೆ ಮಾಣಿಕಮ್ಮ ಮಾರಾಟ ಮಾಡಿದ್ದರೂ ಕೂಡ ಹೇಗಾದರೂ ಪಡೆಯಬೇಕು ಎಂದು ವಾದಿ ಈ ದಾವೆ ಸಲ್ಲಿಸಿದ್ದಾರೆ ಮತ್ತು ವಾದಿ ನನ್ನ ಪಕ್ಕದ ಮನೆಯವರು ಆಗಿರುವ ಕಾರಣ ಅವರಿಗೆ ಅನುಕೂಲ ಆಗುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸೊಸೆ ಗ್ರಾಮ ಪಂಚಾಯತಿ ಸದಸ್ಯ ಆಗಿದ್ದಾರೆ ಎಂದರೆ ಸರಿ. ಸದರಿ ಪಂಚಾಯತಿ ಚುನಾವಣೆಯಲ್ಲಿ ನನ್ನ ಸೊಸೆ ಗೆಲ್ಲಲು ವಾದಿ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ವಾದಿ ನಮಗೆ ಮೇಲಿಂದ ಮೇಲೆ ಕೈಸಾಲ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಈ ಮೇಲಿನ 2 ಕಾರಣಗಳಿಂದಾಗಿ ನಾನು ವಾದಿ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾನು ಮಲ್ಲಮ್ಮಳ ಜೊತೆ ಕೆಲಸಕ್ಕೆ ಹೋಗುತ್ತಿದ್ದೆ. ಆಗ ನನಗೆ ಚಾರಾಣೆ ಕೂಲಿ ಕೊಡುತ್ತಿದ್ದರು. ಮಾಣಿಕಮ್ಮ ಬದುಕಿದ್ದಾಗ ನಾನು ದಾವಾ ಸ್ವತ್ತಿಗೆ ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಪಕ್ಕದ ಮನೆಯವಳಾದ ಕಾರಣ ಅವರ ಜೊತೆ ಹಾಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೂಲಿಗೆ ಹೋಗಬೇಕಾದರೆ 4-5 ಜನ ಹೋಗುತ್ತಾರೆ ಎಂದರೆ ಸರಿ. ಮಾಣಿಕಮ್ಮ ದಾವಾ ಸ್ವತ್ತನ್ನ ಮಾರಾಟ ಮಾಡಿದ ದಿನದಿಂದ ಇಲ್ಲಿಯವರೆಗೆ ರಾಮಲಿಂಗಪ್ಪ ಮತ್ತು ಅವರ ಮಕ್ಕಳು ದಾವಾ ಸ್ವತ್ತಿನ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಮಾಣಿಕಮ್ಮ ದಾವಾ ಸ್ವತ್ತನ್ನು ಯಾರಿಗೂ ಮಾರಾಟ ಮಾಡಿಲ್ಲ ಎಂದು ಹೇಳಿದ್ದೇನೆ ಆಬಗ್ಗೆ ದಾಖಲಾತಿ ನೋಡಿಲ್ಲ. ನನ್ನ ವಕೀಲರು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯ್ಯಾರಿಸಿದ್ದು ನನಗೆ ಅದರ ಸಂಗತಿಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗೆ ಗೊತ್ತಿಲ್ಲದಂತೆ ಪ್ರತಿವಾದಿ ದಾವಾ ಜಮೀನನ್ನು ಆತನ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಬಗ್ಗೆ ದಾಖಲಾತಿ ನೋಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣದಲ್ಲಿ ಪತ್ರದಲ್ಲಿ ಕಾನೂನು ಅಂಶಗಳನ್ನು ನನ್ನ ವಕೀಲರು ಬರೆದಿದ್ದಾರೆ. ವಾದಿ ಕೂಡ ಹೇಳಿದ್ದು ಅವರು ಹೇಳಿದಂತೆ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯ್ಯಾರಿಸಿದ್ದಾರೆ ಎಂದರೆ ಸರಿಯಲ್ಲ.

OS No. 16/2024

PW-2

ಪ್ರತಿವಾದಿ ವಾದಿಯ ದಾವಾ ಸ್ವತ್ತಿನ ಕಬ್ಜಾಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿ ಮತ್ತು ವಕೀಲರು ಸೇರಿ ನನ್ನ ಮುಖ್ಯ ವಿಚಾರಣಾಪ ಪ್ರಮಾಣ ಪತ್ರ ತಯ್ಯಾರಿಸಿದ್ದು ನಾನು ಅದಕ್ಕೆ ಕೇವಲ ಹೆಬ್ಬೆಟಿನ ಗುರುತನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ, ನನಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಓದಿ ಹೇಳಿಲ್ಲ ಎಂದರೆ ಸರಿ. ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಳು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**